### ಸಮ್ಮತ ಅಭ್ಯರ್ಥಿಯಾಗಿ ಮಾಜಿ ಸಚಿವ ಟಿ.ಬಿ.ಜಯಚಂದ್ರ

### ಟಿಬಿಜೆ, ಪರಮೇಶ್ವರ್, ರಾಜಣ್ಣ ಸಾಲಿಡ್ ಕಾಂಬಿನೇಷನ್

# ಶಿರಾದಲ್ಲಿ ಕಾಂಗ್ರೆಸ್ ಜಾಣ ನಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ಶಿರಾ ವಿಧಾನಸಭೆ ಕ್ಷೇತ್ರದ ಉಪ ಚುನಾವಣೆ ವ್ಯೂಹ ರಚನೆಯಲ್ಲಿ ಉಳಿದೆಲ್ಲ



ಪಕ್ಷಗಳಿಗಿಂತ ಒಂದು ಹೆಜ್ಜೆ ಮುಂದೆ ಹೋಗಿರುವ ಕಾಂಗ್ರೆಸ್, ತನ್ನ ಅಭ್ಯರ್ಥಿ ಆಯ್ಕೆಯನ್ನು ಅಂತಿಮಗೊಳಿಸಿದೆ. ಮಾಜಿ ಸಚಿವ ಹಾಗೂ ಕ್ಷೇತ್ರದ ಮಾಜಿ ಶಾಸಕ ಟಿ.ಬಿ.ಜಯಚಂದ್ರ ಅವರನ್ನೇ ಕಣಕ್ಕಿಳಿಸಲು ನಿರ್ಧರಿಸಲಾಗಿದೆ.

## ಉಪಸಮರ..ಕಣ

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಬುಧವಾರ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಯಲ್ಲಿ ನಡೆಯುತ್ತಿದ್ದ ಹಗ್ಗ ಜಗ್ಗಾಟ ಈ ಬಾರಿ ಮಾಯವಾಗಿದೆ. ಒಕ್ಕಲಿಗ, ಪರಿಶಿಷ್ಟ ಸಂಯೋಜನೆಯೊಂದಿಗೆ ಕಾಂಗ್ರೆಸ್ ಅಖಾಡಕ್ಕೆ ಇಳಿಯಲು ನಿರ್ಧರಿಸಿದೆ. ತಕ್ಷಣದಿಂದಲೇ ಚುನಾವಣಾ ಸಿದ್ಧತಾ ಕಾರ್ಯ ಆರಂಭಿಸಲು ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲಾಗಿದೆ.

ಶಿರಾ ಉಪ ಚುನಾವಣೆಗೆ ಟಿಕೆಟ್ ಆಕಾಂಕ್ಷಿಯೆಂದು ಹೇಳಿಕೊಂಡಿದ್ದ ಮಾಜಿ ಶಾಸಕ ಕೆ.ಎನ್.ರಾಜಣ್ಣ 'ಒಳ ಏಟು' ನೀಡಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ. ರಾಜಣ್ಣ ಕಡೆಯಿಂದಲೇ ಜಯಚಂದ್ರ ಹೆಸರು ಸೂಚನೆ ಮಾಡಿಸುವುದರಲ್ಲಿ ಕಾಂಗ್ರೆಸ್ ನಾಯಕರು ಯಶಸ್ವಿಯಾಗಿದ್ದಾರೆ. ಜತೆಗೆ ಜಯಚಂದ್ರ ಜತೆಗೆ ಮಾಜಿ ಡಿಸಿಎಂ ಡಾ. ಜಿ. ಪರಮೇಶ್ವರ ನೇತೃತ್ವದಲ್ಲಿ ಈ ಚುನಾವಣೆ ಎದುರಿಸಲು ನಿರ್ಧರಿಸಲಾಗಿದೆ. ರಾಜಣ್ಣ ಅವರಿಗೆ ಉಪ ಚುನಾವಣೆಯ ಸಹ ಅಧ್ಯಕ್ಷರ ಪಟ್ಟವನ್ನೂ ಕಟ್ಟಲಾಗಿದೆ. ಹೀಗಾಗಿ ಒಂದೇ ಸಭೆಯಲ್ಲಿ ಶಿರಾ ಅಭ್ಯರ್ಥಿ ಆಯ್ಕೆಗೆ ಸಂಬಂಧಿಸಿದ ಜಟಿಲತೆಯನ್ನು ಕಾಂಗ್ರೆಸ್ ಪರಿಹರಿಸಿಕೊಂಡಿದೆ. ಹೈಕಮಾಂಡ್‌ಗೆ ಜಯಚಂದ್ರ ಹೆಸರು ಶಿಫಾರಸು ಆಗಲಿದೆ. ಹೈಕಮಾಂಡ್‌ನಿಂದಲೂ ಜಯಚಂದ್ರ ಹೆಸರು ಅಂತಿಮವಾಗುವುದು ನಿಶ್ಚಿತವಾಗಿದೆ.

**ಕಾಂಬಿನೇಷನ್ ಏನು?**

ಶಿರಾ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮೊದಲಿನಿಂದಲೂ ಹಿಡಿತ ಹೊಂದಿದೆ. ಕುಂಚಟಿಗ ಒಕ್ಕಲಿಗ, ಪರಿಶಿಷ್ಟ, ಕುರುಬ ಮತ ಸಂಯೋಜನೆಯೊಂದಿಗೆ ಜಯಚಂದ್ರ ಸತತ ಗೆಲುವು ಸಾಧಿಸುತ್ತಾ ಬಂದಿದ್ದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಪುತ್ರನಿಗೂ ಚಿಕ್ಕನಾಯಕನಹಳ್ಳಿ ಕ್ಷೇತ್ರದಿಂದ ಟಿಕೆಟ್ ಪಡೆದು ಕಣಕ್ಕೆ ಇಳಿಸಿದ್ದರಿಂದ ಶಿರಾ ಹಾಗೂ ಚಿಕ್ಕನಾಯಕನಹಳ್ಳಿಯ ಮತ ಸಂಯೋಜನೆಯಲ್ಲಿ ವ್ಯತ್ಯಾಸವುಂಟಾಯಿತು. ಹೀಗಾಗಿ ಎರಡೂ ಕಡೆ ಕಾಂಗ್ರೆಸ್ ಸೋಲುವಂತಾಯಿತು. »17

**ಜೆಡಿಎಸ್ ನಡೆಯೇನು?**

**ಜೆಡಿಎಸ್‌ನಿಂದ ಸತ್ಯನಾರಾಯಣ ಕುಟುಂಬ ಸದಸ್ಯರಿಗೆ ಟಿಕೆಟ್ ನೀಡಲು ಚಿಂತನೆ ನಡೆಸಲಾಗಿದೆ. ಈ ಮೂಲಕ ಅನುಕಂಪದ ಮತ ಗಳಿಕೆಗೆ ತಂತ್ರಗಾರಿಕೆ ರೂಪಿಸಲಾಗುತ್ತಿದೆ.**

● **ಶಿರಾ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ**



**ಕಾಂಗ್ರೆಸ್ ಪಕ್ಷದಿಂದ ಟಿ.ಬಿ. ಜಯಚಂದ್ರ ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲು ತೀರ್ಮಾನಿಸಲಾಗಿದ್ದು ಪಕ್ಷದ ವರಿಷ್ಠರಿಗೆ ಒಂದೇ ಹೆಸರನ್ನು ಕಳುಹಿಸಿಕೊಡುತ್ತೇವೆ. ರಾಜಣ್ಣ ಅವರೇ ಜಯಚಂದ್ರ ಅವರ ಹೆಸರನ್ನು ಸೂಚಿಸಿದ್ದಾರೆ. ಶಿರಾ ಉಪ ಚುನಾವಣೆಯನ್ನು ಡಾ. ಜಿ. ಪರಮೇಶ್ವರ ಅವರ ನೇತೃತ್ವದಲ್ಲಿ ಎದುರಿಸಲು ತೀರ್ಮಾನಿಸಿದ್ದೇವೆ.**

**- ಡಿ.ಕೆ.ಶಿವಕುಮಾರ್**
ಕೆಪಿಸಿಸಿ ಅಧ್ಯಕ್ಷ

---

# ಶಿರಾದಲ್ಲಿ ಕಾಂಗ್ರೆಸ್ ಜಾಣ ನಡೆ

ವಿ.ಕ. 18/9/20

» ಮೊದಲ ಪುಟದಿಂದ

ಜತೆಗೆ ಪರಿಶಿಷ್ಟ ಸಮುದಾಯದ ಮತ ಜಯಚಂದ್ರ ಕೈ ತಪ್ಪಿದ್ದರಿಂದ ಜೆಡಿಎಸ್‌ನ ಸತ್ಯನಾರಾಯಣ ಗೆಲುವು ಸಾಧಿಸಿದ್ದರು.

ಈ ಬಾರಿ ಹಳೆಯ ತಪ್ಪುಗಳನ್ನೆಲ್ಲ ತಿದ್ದಿಕೊಳ್ಳಲು ಮುಂದಾಗಿರುವ ಕಾಂಗ್ರೆಸ್, ಒಕ್ಕಲಿಗ ಹಾಗೂ ಪರಿಶಿಷ್ಟ ಮತ ಸಂಯೋಜನೆಯೊಂದಿಗೆ ಕಣಕ್ಕಿಳಿಯಲು ನಿರ್ಧರಿಸಿದೆ. ಜತೆಗೆ ಕುರುಬ ಸಮುದಾಯದ ಮತ ಕ್ರೋಡೀಕರಣಕ್ಕೆ ಜಯಚಂದ್ರ ಜತೆಗೆ ಆತ್ಮೀಯ ಬಾಂಧವ್ಯ ಹೊಂದಿರುವ ಸಿದ್ದರಾಮಯ್ಯ ಒದಗಿ ಬರುವ ವಿಶ್ವಾಸವಿದೆ. ಕ್ಷೇತ್ರದಲ್ಲಿ ಅಂತಹ ನೆಲೆ ಹೊಂದಿಲ್ಲದ ಬಿಜೆಪಿ ಒಬಿಸಿ ಮತಗಳ ಮೇಲೆ ಕಣ್ಣಿಟ್ಟು ಅಭ್ಯರ್ಥಿ ಆಯ್ಕೆ ಮಾಡುವ ಲೆಕ್ಕಾಚಾರದಲ್ಲಿತ್ತು. ಆದರೆ ಅದಕ್ಕೆ ಮೊದಲೇ ಸಮನ್ವಯದ ಸೂತ್ರದೊಂದಿಗೆ ಕಾರ್ಯಸಾಧ್ಯ ಆಗಬಹುದಾದ ಪ್ರಬಲ ಸಮೀಕರಣವನ್ನು ಕಾಂಗ್ರೆಸ್ ರೂಪಿಸಿದೆ. ಇದರಿಂದಾಗಿ ಉಪ ಚುನಾವಣೆ ಘೋಷಣೆಗೆ ಮುನ್ನವೇ ಕಾಂಗ್ರೆಸ್‌ನಲ್ಲಿ ಚಟುವಟಿಕೆ ಗರಿಗೆದರಿದಂತಾಗಿದೆ.

ಕಾಂಗ್ರೆಸ್‌ನ ಟ್ರಬಲ್ ಶೂಟರ್ ಎಂದೇ ಖ್ಯಾತರಾಗಿರುವ ಡಿ.ಕೆ.ಶಿವಕುಮಾರ್ ಅವರಿಗೆ ಈ ಚುನಾವಣೆ ವೈಯಕ್ತಿಕವಾಗಿ ಸವಾಲು. ಕೆಪಿಸಿಸಿ ಅಧ್ಯಕ್ಷರಾಗಿ ನೇಮಕಗೊಂಡ ನಂತರ ಎದುರಿಸುತ್ತಿರುವ ಮೊದಲ ಚುನಾವಣೆ ಇದಾಗಿದ್ದು, ಎಲ್ಲ ರೀತಿಯ ತಂತ್ರಗಾರಿಕೆಯ ಮೂಲಕ ಉಪ ಸಮರದಲ್ಲಿ ಗೆಲುವು ಸಾಧಿಸುವುದಕ್ಕೆ ತಂತ್ರಗಾರಿಕೆ ನಡೆಸಲಾಗುತ್ತಿದೆ. ಈ ಅಂಶವೂ ಕಾಂಗ್ರೆಸ್‌ಗೆ ಪ್ರಾಬಲ್ಯ ತಂದುಕೊಡಲಿದೆ ಎಂದು ಹೇಳಲಾಗುತ್ತಿದೆ.